ರಾಯಚೂರು ವಿಶ್ವವಿದ್ಯಾಲಯ RAICHUR UNIVERSITY

ಯರಗೇರಾ–584133, ರಾಯಚೂರು, ಕರ್ನಾಟಕ, ಭಾರತ

Office No. +919141030953 ಪರೀಕ್ಷಾ ವಿಭಾಗ E-mail: registrarevrur@gmail.com

ಕ್ರ.ಸಂ: ರಾವಿರಾ/ಪರೀಕ್ಷಾ/ಯು.ಜಿ/2023–24/666 ದಿನಾಂಕ:17.01.2024

**ಸುತ್ತೋಲೆ**

**ವಿಷಯ:** ರಾಯಚೂರು ವಿಶ್ವವಿದ್ಯಾಲಯದ ಪರೀಕ್ಷಾ ಹಾಗೂ ಇನ್ನಿತರ ಕಾರ್ಯಗಳಿಗೆ ಉಪನ್ಯಾಸಕರ (ಸಹಪ್ರಾಧ್ಯಾಪಕರು, ಪ್ರಾಧ್ಯಾಪಕರು, ಅತಿಥಿ ಉಪನ್ಯಾಸಕರು) ಜೇಷ್ಠತಾ ಪಟ್ಟಿಯನ್ನು ತಯಾರಿಸುವ ಕುರಿತು.

*****

ಈ ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ರಾಯಚೂರು ವಿಶ್ವವಿದ್ಯಾಲಯದ ಅಧೀನದಲ್ಲಿ ಬರುವಂತಹ ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳ ಎಲ್ಲಾ ಪದವಿ ಕಾಲೇಜಿನ ಉಪನ್ಯಾಸಕರಗಳಿಗೆ ತಿಳಿಯಪಡಿಸುವುದೇನೆಂದರೆ, ತಮ್ಮ ಕಾಲೇಜಿನಿಂದ ಸಲ್ಲಿಸಿರುವ ಮತ್ತು ವಿಶ್ವವಿದ್ಯಾಲಯದ ಡೇಟಾಬೇಸ್‌ನಲ್ಲಿ(Google Sheet) ನಮೂದಾಗಿರುವ ಉಪನ್ಯಾಸಕರಗಳ ಜೇಷ್ಠತೆ ಪಟ್ಟಿಯನ್ನು ಸರಕಾರಿ & ಅನುದಾನಿತ, ಸರಕಾರಿ ಕಾಲೇಜಿನ ಅತಿಥಿ ಉಪನ್ಯಾಸಕರು ಹಾಗೂ ಖಾಸಗಿ ಉಪನ್ಯಾಸಕರು ಎಂದು ಮೂರು ವಿಧದಲ್ಲಿ ಪಟ್ಟಿ ಮಾಡಲಾಗುತ್ತದೆ. ಈ ಹಿಂದೆ ಗೂಗಲ್ ಶೀಟ್‌ನಲ್ಲಿ ನೀಡಿದ ಉಪನ್ಯಾಸಕರಗಳ ಮಾಹಿತಿಯು ಈ ಕೆಳಗಿನಂತಿದೆ. ಉಪನ್ಯಾಸಕರಗಳು ಪಟ್ಟಿಯನ್ನು ಪರಿಶೀಲಿಸಿ, ಯಾವುದಾದರು ಮಾಹಿತಿ ತಪ್ಪಿದಲ್ಲಿ ಅಥವಾ ಬದಲಾವಣೆ ಇದ್ದಲ್ಲಿ ಅಥವಾ ಸೇರ್ಪಡೆ ಇದ್ದಲ್ಲಿ ಅಥವಾ ವರ್ಗಾವಣೆಯಾದ ಉಪನ್ಯಾಸಕರಗಳ ಮಾಹಿತಿಯನ್ನು ಪ್ರಾಂಶುಪಾಲರುಗಳ ಇ–ಮೇಲ್‌ಗೆ ಕಳುಹಿಸಿದ ಗೂಗಲ್ ಶೀಟ್‌ನಲ್ಲಿರುವ ಪಟ್ಟಿಯನ್ನು ದಿನಾಂಕ 18.01.2024ರ ಒಳಗೆ ನವೀಕರಿಸಿ ಇ–ಮೇಲ್ ಮುಖಾಂತರ Approved List ಎಂದು ನಮೂದಿಸಿ ಕಳುಹಿಸಿ ಕೊಡಬೇಕಾಗಿ ಈ ಮೂಲಕ ಸೂಚಿಸಲಾಗಿದೆ.

**ಸೂಚನೆಗಳು:**

1. ಪಟ್ಟಿಯನ್ನು ನವೀಕರಿಸಿ Approved List ಎಂದು ನಮೂದಿಸಿ ಇ–ಮೇಲ್ (computercentrerur@gmail.com) ಮುಖಾಂತರ ಕಳುಹಿಸತಕ್ಕದ್ದು.
2. ನಿಗದಿತ ದಿನಾಂಕದೊಳಗೆ ಸಲ್ಲಿಸಿದ ಉಪನ್ಯಾಸಕರಗಳ ಪಟ್ಟಿಯನ್ನು ಮಾತ್ರ ವಿಶ್ವವಿದ್ಯಾಲಯ ಪರಿಗಣನೆಗೆ ತೆಗೆದುಕೊಳ್ಳಲಾಗುತ್ತದೆ.
3. Approved List ನಲ್ಲಿರುವ ಉಪನ್ಯಾಸಕರಗಳನ್ನು ಮಾತ್ರ ವಿಶ್ವವಿದ್ಯಾಲಯ ಪರೀಕ್ಷಾ ಹಾಗೂ ಇನ್ನಿತರ ಕಾರ್ಯಗಳಿಗೆ ಜೇಷ್ಠತ ಆಧಾರದ ಮೇಲೆ ನಿಯೋಜಿಸಲಾಗುವುದು.
4. ತಪ್ಪಾದ ಮಾಹಿತಿಯನ್ನು ಒದಗಿಸಿರುವ ಸಂದರ್ಭದಲ್ಲಿ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿದ್ದು ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು.
5. ನಿಗದಿತ ದಿನಾಂಕ ಮುಗಿದ ನಂತರ ಗೂಗಲ್ ಶೀಟ್‌ನ ಸ್ವೀಕೃತಿಯನ್ನು ಸ್ಥಗಿತಗೊಳಿಸಲಾಗುವುದು.
6. ಸರಕಾರಿ ಕಾಲೇಜುಗಳಲ್ಲಿ ನೇಮಕಾತಿ ಆಗುವ ಮುಂಚಿನ ಸೇವೆಯ ಮಾಹಿತಿಯನ್ನು ಪ್ರಸ್ತುತ ಕಾಲೇಜಿನ ಪ್ರಾಂಶುಪಾಲರು ದೃಢೀಕರಿಸಿ ಸೇವೆಯನ್ನು ಗಣನೆಗೆ ತೆಗೆದುಕೊಳ್ಳಬಹುದು.

**(ಪ್ರೊ. ಯರಿಸ್ವಾಮಿ ಎಂ.)**
ಕುಲಸಚಿವರು (ಮೌಲ್ಯಮಾಪನ)
ರಾಯಚೂರು ವಿಶ್ವವಿದ್ಯಾಲಯ, ರಾಯಚೂರು

ಪ್ರತಿಗಳು :

1. ಮಾನ್ಯ ಕುಲಪತಿಗಳು ಕಾರ್ಯದರ್ಶಿಗಳು/ ಮಾನ್ಯ ಕುಲಸಚಿವರ ಆಪ್ತ ಸಹಾಯಕ ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
2. ಕುಲಸಚಿವರು ಮೌಲ್ಯಮಾಪನ ಆಪ್ತಕಾರ್ಯದರ್ಶಿ ರಾಯಚೂರು ವಿಶ್ವವಿದ್ಯಾಲಯ, ರಾಯಚೂರು.
3. ಕಚೇರಿ ಪ್ರತಿ.